ಕರ್ನಾಟಕ ಸರ್ಕಾರ

Govt of Karnataka


**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103**

**OFFICE OF THE DEPUTY COMMISSIONER, BAGALAKOTE DISTRICT, BAGALAKOTE- 587103**

**Ph: 08354-235091 Fax: 08354-235096** E-mail:deo.bagalkot@gmail.com


ಕ್ರ:ಕಂಶಾ:ಎಲ್‌ಎಕ್ಯೂ:ಸಿಆರ್-12/15-16 ಬಾಗಲಕೋಟ ದಿ: 30-06-2020

ಗೆ,

ಉಪವಿಭಾಗಾಧಿಕಾರಿಗಳು

ಜಮಖಂಡಿ

ವಿಷಯ:ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ **ಚೌಡಾಪೂರ** ಗ್ರಾಮದ ಕೆಲವು ಜಮೀನುಗಳ ಭೂಸ್ವಾಧೀನತೆಯ ಬಗೆಗಿನ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿಯನ್ನು ಅನುಮೋದಿಸಿದ ಕುರಿತು

ಉಲ್ಲೇಖ:ಆಯುಕ್ತರು, ರಾಜ್ಯ ಪುನರವಸತಿ ಮತ್ತು ಪುನರನಿರ್ಮಾಣ ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಪತ್ರ ಸಂಖ್ಯೆ:ಕಂಇ 31:ಎಲ್‌ಆರ್‌ಆರ್ :2020 ದಿನಾಂಕ:29-06-2020.

**ಮೇಲ್ಕಾಣಿಸಿದ ವಿಷಯಕ್ಕೆ** ಸಂಬಂಧಿಸಿದಂತೆ ಉಲ್ಲೇಖಿತದ್ವಯ ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗ ನಿರ್ಮಾಣದ ಯೋಜನೆಯಡಿ ಬಾಗಲಕೋಟ ಜಿಲ್ಲೆಯ **ಮುಧೋಳ** ತಾಲೂಕಿನ **ಮುದ್ದಾಪೂರ** ಗ್ರಾಮದ ಒಟ್ಟು ಕ್ಷೇತ್ರ **09-19-02 ಎ/ಗುಂ/ಆ** ಕೆಲವು ಜಮೀನುಗಳ ಭೂಸ್ವಾಧೀನತೆಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕರಡು ಯಾದಿಯನ್ನು `**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ** 2013`ರ ಕಲಂ 18 ರಡಿ ಅನುಮೋದಿಸಿದ್ದು, ಸದರಿ ಅನುಮೋದಿತ ಮೂಲ ಕರಡು ಯಾದಿಯನ್ನು ಉಲ್ಲೇಖಿತ ಪತ್ರಕ್ಕೆ ಲಗತ್ತಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಮುಂದಿನ ಸೂಕ್ತ ಕ್ರಮವಹಿಸಲು ನಿರ್ದೇಶಿಸಿದ್ದು ಇರುತ್ತದೆ.

191/5

ಉಲ್ಲೇಖಿತ ಸರಕಾರದ ಪತ್ರವನ್ನು ಹಾಗೂ ಅನುಮೋದಿತ ಪುನರ್ವಸತಿ ಮತ್ತು ಪುನರ್‌ನಿರ್ಮಾಣ **ಮೂಲ ಕರಡು ಯಾದಿಯನ್ನು** ಈ ಪತ್ರಕ್ಕೆ ಲಗತ್ತಿದ್ದು, ಸದರಿ ಸರಕಾರದ ಪತ್ರದಲ್ಲಿ ನಿರ್ದೇಶಿಸಿದಂತೆ ಅಗತ್ಯ ಕ್ರಮ **ಕೈಗೊಳ್ಳಲು** ಹಾಗೂ ನಿಯಮಾನುಸಾರ ಕಲಂ 19(1) ರಡಿ ಅಧಿಸೂಚನೆ ತಯಾರಿಸುವ ಕುರಿತು ಸೂಕ್ತ ಕ್ರಮ **ಕೈಗೊಳ್ಳಲು ಸೂಚಿಸಿದೆ.** ಹಾಗೂ ಉಲ್ಲೇಖಿತ ಸರಕಾರದ ಪತ್ರದನ್ವಯ ಕಳುಹಿಸಿದ ಅನುಮೋದಿತ ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಕರಡು ಯಾದಿಯ ಪ್ರತಿಯನ್ನು ನಿಯಮಾನುಸಾರ ದಿನಾಂಕ:30-06-2020 ರಂದು **ಈ ಕಾರ್ಯಾಲಯದ ನೋಟೀಸ ಬೋರ್ಡಿಗೆ** ಡಕಾಯಿಸಿ ಪ್ರಸಿದ್ಧಿಪಡಿಸಲಾಗಿದೆ.

ಅಪ್ಪರ ಜಿಲ್ಲಾಧಿಕಾರಿಗಳು
ಬಾಗಲಕೋಟ

**ಪ್ರತಿ:**ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್‌ಆಯ್‌ಸಿ ಬಾಗಲಕೋಟ ಇವರಿಗೆ

**2/-**ಉಲ್ಲೇಖಿತ ಸರಕಾರದ ಪತ್ರದನ್ವಯ ಅನುಮೋದನೆಗೊಂಡ ಪುನರವಸತಿ ಮತ್ತು ಪುನರನಿರ್ಮಾಣದ ಬಗೆಗಿನ ಕರಡು ಯಾದಿಯನ್ನು ಈ ಪತ್ರಕ್ಕೆ ಲಗತ್ತಿಸಿದ್ದು, ಸದರಿ ಕರಡು ಯಾದಿಯನ್ನು ಜಿಲ್ಲಾಧಿಕಾರಿಯವರ ವೆಬ್‌ಸೈಟಿನಲ್ಲಿ ನಿಯಮಾನುಸಾರ ಪ್ರಕಟಪಡಿಸಲು ನಿರ್ದೇಶಿಸಿದೆ.